

ಆಕೆ: ನಾನು ನಿನಗಾಗಿ 'ಪ್ರಪಂಚದ ತುತ್ತ ತುದಿಗೆ ಬೇಕಾದರೂ ಹೋಗ್ತೀನಿ'

ಆತ: ಆದ್ರೆ.. ಅಲ್ಲೇ ಇದ್ದು ಬಿಡ್ತೀಯಾ?

★★★

ಆಕೆ: ಆ ಎರಡು ಹೊರತುಪಡಿಸಿದರೆ ನೀನೊಬ್ಬಳು ಅತ್ಯುತ್ತಮ ನೃತ್ಯಗಾತಿ ಆಗಿರುತ್ತೀಯೆ!

ಈಕೆ : ಆ ಎರಡು ಅಂದರೆ ಯಾವುವು?

ಆಕೆ: ನಿನ್ನ ಕಾಲುಗಳು!

★★★

ಡಾಕ್ಟರ್ : ನೀನು ತುಂಬಾ ಕೆಟ್ಟ ಕಾಯಿಲೆಯಿಂದ ಬಳಲುತ್ತಿದ್ದೀಯ!

ರೋಗಿ : ನನಗೆ ಇನ್ನೊಂದು ಅಭಿಪ್ರಾಯ ಸಿಗಬಹುದೇ?

ಡಾಕ್ಟರ್ : ಓಹೋ. ನೀನು ನೋಡಲು ದರಿದ್ರನಂತೆಯೂ ಕಾಣ್ತೀಯ!

★★★

ಪ್ರಯಾಣಿಕ: ಎಲ್ಲಾ ಟ್ರೈನುಗಳೂ ತುಂಬಾ ತಡವಾಗಿ ಬರುತ್ತವೆ, ತಡವಾಗಿ ಹೋಗುತ್ತವೆ. ಹೀಗಿರುವಾಗ 'ಟೈಂ ಟೇಬಲ್' ಇದ್ದು ಏನು ಪ್ರಯೋಜನ?

ಅಧಿಕಾರಿ: ಚೆನ್ನಾಗಿ ಹೇಳಿದ್ರಿ, 'ಟೈಂ ಟೇಬಲ್' ಇಲ್ದಿದ್ರೆ 'ಟ್ರೈನು ತಡವಾಗಿ ಬರ್‍ತಿದೆ, ತಡವಾಗಿ ಹೋಗ್ತಿದೆ' ಅಂತ ಗೊತ್ತಾಗೋದಾದರೂ ಹೇಗೆ?

★★★

ಗುಂಡ: ನಾನು ನಿನ್ನೊಂದಿಗೆ ಎಲ್ಲವನ್ನೂ ಹಂಚಿಕೊಳ್ಳಲು ಇಚ್ಛಿಸುತ್ತೇನೆ..

ಪ್ರೇಯಸಿ: ಹಾಗಾದರೆ ನಿನ್ನ ಬ್ಯಾಂಕ್ ಬ್ಯಾಲೆನ್ಸ್‌ನೊಂದಿಗೆ ಪ್ರಾರಂಭಿಸೋಣವೇ?

★★★

ಟೀಚರ್: ಸೋಮು, ಮನೇಲಿ ನಿಮ್ಮ ತಂದೆ ನಿನಗೆ 'ಹೋಮ್ ವರ್ಕ್' ಮಾಡೋಕೆ ಸಹಾಯ ಮಾಡ್ತಾರಾ?

ಬಾಬು: ಇಲ್ಲ ಮಿಸ್, 'ಪೂರ್ತಿ ಹೋಮ್ ವರ್ಕ್' ಅವರೇ ಮಾಡ್ತಾರೆ!

★★★

ಟೀಚರ್: ವೆಸ್ಟ್‌ಇಂಡೀಸ್‌ನಿಂದ ಬರೋ ಕೆಲವು ಪದಾರ್ಥಗಳು ಯಾವುವು?

ಬಾಬು: ನನಗೆ ಗೊತ್ತಿಲ್ಲ ಮಿಸ್.

ಟೀಚರ್: ನಿಮ್ಮ ಮನೆಗೆ 'ಸಕ್ಕರೆ' ಎಲ್ಲಿಂದ ಬರುತ್ತೆ ಅಂದ್ಕೊಂಡಿದೀಯ?

ಬಾಬು: 'ಪಕ್ಕದ ಮನೆಯಿಂದ'!

★★★

ತಾಯಿ : ಮಗಳೇ ನಿನ್ನ ಮೊದಲ ದಿನ ಸ್ಕೂಲು ಹೇಗಿತ್ತು, ಖುಷಿಯಾಯ್ತಾ?

ಮಗಳು : ಮೊದಲ ದಿನನಾ? ಅಂದ್ರೆ ನಾನು ನಾಳೇನೂ ಸ್ಕೂಲಿಗೆ ಹೋಗಬೇಕಾ?

(ಸಂಗ್ರಹ) ಸುಕೇಶವ



ಬೆಲೆ ರೂ. 16 ಮಾತ್ರ

ವರ್ಷದ ಸಮಗ್ರ ಮಾರ್ಗದರ್ಶಿ

2012

ದಿನದರ್ಶಿಕೆ ಮಾರುಕಟ್ಟೆಯಲ್ಲಿ ಲಭ್ಯ




ಪ್ರತಿಗಳಿಗಾಗಿ ನಿಮ್ಮ ನ್ಯೂಸ್ ಏಜೆಂಟರು, ಪುಸ್ತಕದ ಅಂಗಡಿಗಳು ಅಥವಾ ನಮ್ಮ ಕಚೇರಿಗಳು:

ದಿ ಪ್ರಿಂಟರ್ಸ್(ಮೈಸೂರ್) ಪ್ರೈ. ಲಿ., 75, ಎಂ.ಜಿ. ರಸ್ತೆ, ಬೆಂಗಳೂರು-560 001.

ದೂರವಾಣಿ: 25880200/202/216/226/227.

ಬಸವನಗುಡಿ ಕಚೇರಿ: 25880208. ನಗರ ಕಚೇರಿ: ಕೆ.ಜಿ. ರಸ್ತೆ: 25880209. ರಾಜಾಜಿ ನಗರ: 25880210. ಜೆ.ಸಿ. ರಸ್ತೆ: 25880218. ಗಂಗಾನಗರ: 25880227. ಬಿ.ಟಿ.ಎಂ.: 25880229. ತಿಪ್ಪಸಂದ್ರ: 25880213. ಮೈಸೂರು: 2420532/2420129. ಹುಬ್ಬಳ್ಳಿ: 2372709/2372081. ಮಂಗಳೂರು: 2215852/2218334. ಗುಲ್ಬರ್ಗ: 255539/221808 ಸಂಪರ್ಕಿಸಿ.